# ಅಂದಿನ ದಸರಾ ಎಷ್ಟೊಂದು ಸುಂದರ!

**64 ವರ್ಷಗಳ ಹಿಂದಿನ ಮೈಸೂರು ದಸರಾ ಸಂಭ್ರಮವನ್ನು ಇಂದು ನೆನಪಿಸಿಕೊಂಡಾಗ ಮನಸ್ಸು ಪ್ರಫುಲ್ಲವಾಗುತ್ತದೆ. ಆ ವೈಭವ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.**

■ **ಕೃಷ್ಣಸುಬ್ಬರಾವ್, ಬೆಂಗಳೂರು**



ಸುಮಾರು 60 ವರ್ಷಗಳಷ್ಟು ಹಿಂದಿನ ವಿಶ್ವಪ್ರಸಿದ್ಧ ಮೈಸೂರು ದಸರಾ ವೈಭವವನ್ನು ಎಂದಾದರೂ ಮರೆಯಲಾದೀತೆ?

ಜಯಚಾಮರಾಜೇಂದ್ರ ಒಡೆಯರ್ ಸಿಂಹಾಸನದ ಮೇಲೆ ಕೂರುತ್ತಿದ್ದ ಕಾಲದಲ್ಲಿ ಮೈಸೂರಿನ ನಿವಾಸಿಗಳ ನೆಂಟರಿಷ್ಟರಿಂದ ತುಂಬಿ ತುಳುಕುತ್ತಿದ್ದವು. ಚಾಮುಂಡಿಬೆಟ್ಟ, ಪ್ರಾಣಿ ಸಂಗ್ರಹಾಲಯ, ಕೆ.ಆರ್.ಎಸ್. ನಂತಹ ಸ್ಥಳಗಳ ಜೊತೆ ಮತ್ತೊಂದು ಆಕರ್ಷಣೀಯ ಸ್ಥಳ ದಸರಾ ವಸ್ತು ಪ್ರದರ್ಶನ. ರೈಲ್ವೆ ನಿಲ್ದಾಣದ ಪಕ್ಕ ರೈಲ್ವೆ ಆಫೀಸ್ ಅದರ ಬದಿಯಲ್ಲಿ ವಿಸ್ತಾರವಾದ ಜಾಗದಲ್ಲಿ ಶಾಶ್ವತ ಕಟ್ಟಡದಲ್ಲಿ ತಿಂಗಳ ಕಾಲ ವಸ್ತುಪ್ರದರ್ಶನ ಏರ್ಪಾಡಾಗುತ್ತಿತ್ತು. ಈಗ ಅದು ಮೈಸೂರು ಮೆಡಿಕಲ್ ಕಾಲೇಜಿನ ಭಾಗವಾಗಿದೆ.

ರೈಲ್ವೆ ನಿಲ್ದಾಣದ ಎದುರಿನಲ್ಲಿ ಜೀವನ ರಾಯನ ಕಟ್ಟೆಯಲ್ಲಿ ವಸ್ತುಪ್ರದರ್ಶನದ ಇನ್ನೊಂದು ವಿಭಾಗವಿರುತ್ತಿತ್ತು. ಅಲ್ಲಿ ಮಕ್ಕಳ ಮನರಂಜನೆಗಾಗಿ ಮೆರಿಗೊ ರೌಂಡ್, ಜಯಿಂಟ್ ವೀಲ್ ಹಾಗೂ ಬಾವಿಯಲ್ಲಿ ಮೋಟಾರ್ ಸೈಕಲ್ ಬಿಡುವ ಸಾಹಸ ಮುಂತಾದ ಆಕರ್ಷಣೆಗಳು ಇರುತ್ತಿತ್ತು. ವಸ್ತು ಪ್ರದರ್ಶನಕ್ಕೆ ತೆಗೆದುಕೊಂಡ ಒಂದೇ ಟಿಕೆಟಿನಲ್ಲಿ ಎರಡೂ ಕಡೆ ನೋಡಬಹುದಿತ್ತು. ಕಟ್ಟಡದಲ್ಲಿದ್ದ ಮುಖ್ಯ ವಸ್ತುಪ್ರದರ್ಶನ ನೋಡಿ ಸುಸ್ತಾದ ಕೆಲವರು ದೇವರಾಯನ ಕಟ್ಟೆ ವಿಭಾಗವನ್ನು ನೋಡದೆಯೇ ಹೋಗುತ್ತಿದ್ದರು. ಅಂತಹವರಿಂದ ಅರ್ಧ ಟಿಕೆಟ್‌ನ್ನು ಪಡೆಯಲು ಕೆಲವು ಚಿಕ್ಕ ಹುಡುಗರು ಕಾಯುತ್ತಿದ್ದ ದೃಶ್ಯ ಇನ್ನೂ ಕಣ್‌ಮುಂದೆ ಬರುತ್ತದೆ. ಆಯುಧ ಪೂಜೆ ದಿವಸ ಮಾರ್‌ನವಮಿ ದಿನ ಹಾಗೂ ಪ್ರಸಿದ್ಧ ಸಿನಿಮಾ ತಾರೆಯರ ನೃತ್ಯಪ್ರದರ್ಶನದ ದಿನ ಅಸಾಧ್ಯ ಜನಸಂದಣಿ ಇರುತ್ತಿತ್ತು. ವಸ್ತುಪ್ರದರ್ಶನದ ಹೆಬ್ಬಾಗಿಲಿನಲ್ಲಿ ಸರಗಳ್ಳರು ಪಿಕ್‌ಪಾಕೆಟ್ ಹಾಗೆ ಪಡ್ಡೆ ಹುಡುಗರ ಹಾವಳಿ ಇರುತ್ತಿತ್ತು. ಪೊಲೀಸರು ಎಚ್ಚರಿಕೆ ಕರೆಗಳನ್ನು ಕೊಡುತ್ತಿದ್ದರು. ತಪ್ಪಿಸಿಕೊಂಡ ಮಕ್ಕಳು ಪೊಲೀಸ್ ಠಾಣೆಯಲ್ಲಿದ್ದಾರೆಂದು ಅವರ ವಿವರಗಳನ್ನು ಧ್ವನಿವರ್ಧಕದಲ್ಲಿ ಬಿತ್ತರಿಸುತ್ತಲೇ ಇರುತ್ತಿದ್ದರು. ತಿಂಡಿ ತಿನಿಸುಗಳ ಹೆಸರೇ ಆಕರ್ಷಕವಾಗಿರುತ್ತಿತ್ತು. ಅಯ್ಯಂಗಾರರ 'ರಾಕೆಟ್ ಪುಳಿಯೋಗರೆ'ಗೆ ಅಸಾಧ್ಯ ಬೇಡಿಕೆ ಇರುತ್ತಿತ್ತು.

ಅತಿಹೆಚ್ಚು ಬೇಡಿಕೆ ಇರುತ್ತಿದ್ದ ಸ್ಟಾಲ್‌ಗಳಲ್ಲಿ ಮುಖ್ಯವಾದುದು ಭದ್ರಾವತಿ ಪೇಪರ್ ಮಿಲ್ಸ್‌ನ ಮಳಿಗೆ ಬಿಳಿ ಹಾಳೆಗಳು, ನೋಟ್ ಪುಸ್ತಕಗಳು ಅತ್ಯಂತ ಅಗ್ಗದ ದರದಲ್ಲಿ ಸಿಗುತ್ತಿತ್ತು. ಚಿಕ್ಕಮಕ್ಕಳಿಗೆ ಬಿಳಿಕಾಗದವನ್ನು ಪರೀಕ್ಷಿಸಲು ಬೆಳಕಿಗೆ ಹಿಡಿದು ಬೈಸನ್ (ಕಾಡುಕೋಣ) ನೋಡುವುದು ಒಂದು ಆಟವಾಗಿತ್ತು. ನೈಜ ನೋಟೆಂದು ಗಾಂಧಿ ಚಿತ್ರವನ್ನು ಖಾಲಿ ಜಾಗದಲ್ಲಿ ಪರೀಕ್ಷೆ ಮಾಡುವಂತೆ ಭದ್ರಾವತಿ ಪೇಪರ್‌ನ 'ಬೈಸನ್' ಬ್ರಾಂಡ್ ನೋಡುತ್ತಿದ್ದವು. ಈ ಮಳಿಗೆಗೆ ತಂದೆ ತಾಯಿಗಳೇ ಮಕ್ಕಳು ಕೇಳಿದ್ದನ್ನೆಲ್ಲ ಕೊಡಿಸುತ್ತಿದ್ದರು. ಬಹುಶಃ ಮೈಸೂರಿನ ಸಾಹಿತಿಗಳಿಂದ ಒಳ್ಳೊಳ್ಳೆ ಕೃತಿ ಹೊರಬರಲು ಈ ಒಂದು ಮಳಿಗೆಯ ಸಹಾಯ ಕಾರಣವಾಗಿರಬೇಕು.

ಮಕ್ಕಳ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಮೈಸೂರಿನ ಜನರು ತಮ್ಮ ಮಕ್ಕಳಿಗೆ ನೀಡುತ್ತಿದ್ದ ಪ್ರಚೋದನೆ ಎಂದರೆ 'ನೀನು ಈ ಕೆಲಸ ಮಾಡು ಯಶಸ್ವಿಯಾದರೆ ಮುಂದಿನ ದಸರಾದಲ್ಲಿ ವಸ್ತುಪ್ರದರ್ಶನದಲ್ಲಿ ನೀರಿನಲ್ಲಿ ಶಬ್ದ ಮಾಡುತ್ತ ಹೋಗುವ ಬೋಟ್ ಕೊಡಿಸ್ತೀನಿ, ಬಾವಿಯಲ್ಲಿ ಮೋಟಾರ್ ಬೈಕ್ ಬಿಡುವುದನ್ನು ತೋರಿಸುತ್ತೇನೆ' ಎಂಬಂತಹ ಆಸೆ ತೋರಿಸುತ್ತಿದ್ದರು. ಮಕ್ಕಳು ಆ ದಿನಕ್ಕಾಗಿ ಇಡೀ ವರ್ಷ ಕಾಯುತ್ತಿದ್ದರು.

ಒಮ್ಮೆ ನಮ್ಮ ಮನೆಯಲ್ಲಿ ನಮ್ಮ ಭಾವ ಸುಮ್ಮನೆ ಗಲಾಟೆ ಮಾಡುತ್ತಿದ್ದ ನನ್ನ ಓರಿಗೆಯ ಐದು ಗಂಡು ಮಕ್ಕಳಲ್ಲಿ ಒಂದು ಸ್ಪರ್ಧೆ ಏರ್ಪಡಿಸುತ್ತಿದ್ದರು. ಒಂದೇ ಜಾಗದಲ್ಲಿ ಯಾರು ಹೆಚ್ಚಿನ ಹೊತ್ತು ಕುಳಿತಿರುತ್ತಾರೊ ಅವರಿಗೆ ಮುಂದಿನ ವಸ್ತುಪ್ರದರ್ಶನದಲ್ಲಿ ಕೇಳಿದ ಆಟದ ಸಾಮಾನುಗಳನ್ನು ಕೊಡಿಸುವುದಾಗಿ ಸ್ಪರ್ಧೆ ಏರ್ಪಡಿಸುತ್ತಿದ್ದರು. ಮೊಮ್ಮಕ್ಕಳನ್ನು (ಬೇಸಿಗೆ ರಜಾದಲ್ಲಿ) ಸ್ಪರ್ಧೆಯ ನಿಜವಾದ ಉದ್ದೇಶ ಈಗ ನಾನು ನನ್ನ ಮೊಮ್ಮಕ್ಕಳನ್ನು ಬೇಸಿಗೆ ರಜಾದಲ್ಲಿ ನೋಡಿಕೊಳ್ಳುವ ಸಮಯದಲ್ಲಿ 64 ವರ್ಷದ ನಂತರ ಅರ್ಥವಾಗುತ್ತಿದೆ. ಕುಳಿತ ಹುಡುಗರಿಗೆ ನಮ್ಮ ಭಾವನೇ 'ಎದ್ದರೆ ಚಾಕೊಲೇಟ್' ಎಂಬ ಪ್ರಲೋಭನೆ ಕೊಟ್ಟರು. ಯಾವುದೇ ಆಮಿಷಗಳಿಗೆ ಬಲಿಯಾಗದೆ ನಾನು ಗುರಿ ಸಾಧಿಸಿ, ವಸ್ತುಪ್ರದರ್ಶನದಲ್ಲಿ ಭಾವನಿಂದ ನನಗೆ ಬೇಕಾದ ಆಟದ ಸಾಮಾನುಗಳನ್ನು ಪಡೆದೆ.

ವಸ್ತು ಪ್ರದರ್ಶನದಲ್ಲಿ ತಿರುಗಾಡುವಾಗ ಎಲ್ಲರೂ ತಪ್ಪದೆ ಹೋಗುತ್ತಿದ್ದ ಸ್ಟಾಲ್ ಎಂದರೆ ಫೋಟೊ ಸ್ಟುಡಿಯೊ, ಚಿಕ್ಕಮಕ್ಕಳಿಗೆಲ್ಲ ಫೋಟೊ ತೆಗಿಸುವುದು ಪದ್ಧತಿ. ಕಾರಿಟ್ಟುಕೊಳ್ಳುವುದು ಆಗಿನ ಕಾಲಕ್ಕೆ ಅತ್ಯಂತ ಕಷ್ಟವಾದ್ದರಿಂದ ರೊಟ್ಟಿನ ಕಾರಿನ ಒಳಗೆ ಅಥವಾ ಮುಂದೆ ನಿಂತು ಶ್ರೀಮಂತರ ಪೋಸ್ ಕೊಡುವುದು ಸಾಮಾನ್ಯ ದೃಶ್ಯವಾಗುತ್ತಿತ್ತು. ಊರುಗಳಿಂದ ಬಂದ ಕಸಿನ್ಸ್ ಜೊತೆ ಫೋಟೊ ತೆಗೆಸಿಕೊಳ್ಳುವುದು ಅಷ್ಟೇ ರೋಮಾಂಚನಕಾರಿ ಕೆಲಸವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಲೇಖಕ ತನ್ನ ಸಹೋದರಿ ಇಂದಿರಾ ಜೊತೆ ಸೀರಿಯಸ್ಸಾಗಿ ಕುಳಿತಿದ್ದಾನೆ ಅರವತ್ತು ವರ್ಷಗಳ ಹಿಂದೆ. ಇಂದಿನಂತೆ ಸ್ಮಾರ್ಟ್‌ಫೋನುಗಳಲ್ಲಿ ಸೆಲ್ಫಿ ತೆಗೆಯುವಂತಿದ್ದರೆ ಸ್ಟುಡಿಯೋವನ್ನೇ ನಂಬಿ ಬದುಕುತ್ತಿದ್ದ ಅನೇಕ ವೃತ್ತಿಪರ ಛಾಯಾಗ್ರಾಹಕರೆಲ್ಲ ನಿರುದ್ಯೋಗಿಗಳಾಗುತ್ತಿದ್ದರು. ಎಷ್ಟೇ ಕಷ್ಟವಿದ್ದರೂ ಎದುರಿಗೆ ನಿಂತವರನ್ನು ನಗುವ ಪ್ರಯತ್ನ ಅವರು ಮಾಡುತ್ತಲೇ ಬದುಕುತ್ತಿದ್ದರು. ದಸರಾದಲ್ಲಿ ಒಂದಿಷ್ಟು ಕಾಸು ಬರುತ್ತಿತ್ತು ಅವರಿಗೆ.

ಇಷ್ಟು ಹಳೇ ಫೋಟೋವನ್ನು ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ ತೋರಿಸುವ ನೆಪದಲ್ಲಿ ಆಗಾಗ್ಗೆ ವಸ್ತುಪ್ರದರ್ಶನದ ವೈಭವದ ಸವಿಯನ್ನು ಅನುಭವಿಸುತ್ತಲೇ ಇರುತ್ತೇವೆ ನಾನು, ನನ್ನಕ್ಕ. ■